ಆಗಿದೆ. ಅದರಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಶ್ರೀ ಬಿ.ಆರ್. ಬಕ್ಷಣ್ಣಗೌಡ ಅಂತ ಹೇಳಿ, ಅವರ ಮೇಲೆ ಗುಂಡಿನ ಚಕಮಕಿ ನಡೆದಿದೆ. ಅವರಿಗೆ ಗುಂಡಿನ ಏಟು ಬಿದ್ದಿದೆ. ಸುಮಾರು 30 ಜನ ಇವತ್ತು ವಿಕ್ಟೋರಿಯ ಆಸ್ಪತ್ರೆಯಲ್ಲಿ ಇನ್‌ಪೇಷಂಟ್ ಆಗಿ ಎಮರ್ಜೆನ್ಸಿ ವಾರ್ಡ್‌ನಲ್ಲಿ ಇದ್ದಾರೆ. ಬಹಳ ಶೋಚನೀಯವಾದ ಪರಿಸ್ಥಿತಿಯಲ್ಲಿ ಆಗಾಯಾಳುಗಳು ಇದ್ದಾರೆ. ಕುಣಿಗಲ್ ತಾಲ್ಲೂಕಿನಲ್ಲಿರತಕ್ಕ ಬಿಡನಗೆರೆ ಗ್ರಾಮದಲ್ಲಿ ಪರಿಸ್ಥಿತಿ ಏನು ಇದೆ? ಸುಮಾರು 6-7 ಬಂದೂಕುಗಳಿಂದ ಅಲ್ಲಿ ಹೊಡೆದಾಟ ಆಗಿದೆ. 6-7 ಬಂದೂಕುಗಳನ್ನು ಉಪಯೋಗಗಳನ್ನು ಉಪಯೋಗಿಸಬೇಕಾದರೆ, ಅವು ಎಲ್ಲಿಂದ ಬಂದವು? ಆ ಬಂದೂಕು ದಾರಿಗಳಿಗೆ ಲೈಸನ್ಸ್ ಇತ್ತೆ? ಈ ಬಂದೂಕುಗಳನ್ನೆಲ್ಲಾ ಉಪಯೋಗಿಸಿಕೊಂಡು ಮಾಡಬೇಕಾದರೆ ಬಹಳ ವ್ಯವಸ್ಥಿತವಾಗಿ ಪಿತೂರಿ ಮಾಡಿ ಮಾಡಿರತಕ್ಕಂತಹ ಘಟನೆ ಇದು ಎಂದು ಮೇಲು ನೋಟಕ್ಕೆ ಕಂಡುಬರುತ್ತೆದೆ. ಇವತ್ತು ಸನ್ಮಾನ್ಯ ಗೃಹ ಮಂತ್ರಿಗಳು ಸದನದಲ್ಲೇ ಇದ್ದಾರೆ. ತಮ್ಮ ಮೂಲಕ ನಾನು ಅವರನ್ನು ಒತ್ತಾಯ ಮಾಡುತ್ತಿದ್ದೇನೆ. ಈ ಘಟನೆಯ ಬಗ್ಗೆ ಸವಿಸ್ತಾರವಾದ ಒಂದು ಹೇಳಿಕೆಯನ್ನು ಕೊಡಬೇಕು, ತಪ್ಪಿತಸ್ತರು ಯಾರೇ ಆಗಿರಲಿ, ಕಿಂಚಿತ್ತೂ ಕೂಡ ಯಾವುದೇ ಅನುಕಂಪವನ್ನು ತೋರಿಸದೆ ಅವರ ಮೇಲೆ ಕಠಿಣವಾದ ಕ್ರಮ ಜರುಗಿಸಬೇಕು. ಅಲ್ಲಿ ಸುಮಾರು 25ರಿಂದ 30 ಜನ ಇನ್‌ಪೇಷಂಟ್ ಆಗಿ ವಿಕ್ಟೋರಿಯಾ ಆಸ್ಪತ್ರೆ ಎಮರ್ಜೆನ್ಸಿ ವಾರ್ಡನಲ್ಲಿದ್ದಾರೆ. ಇವತ್ತು ಆ ಗಾಯೂಳುಗಳಿಗೆ ಏಟು ಬಿದ್ದಿರುವುದರಿಂದ ಅವರಲ್ಲಿ ಬಹಳ ಜನಕ್ಕೆ ಪ್ರಾಣಕ್ಕೆ ಅಪಾಯವಾಗತಕ್ಕಂತಹ ಪರಿಸ್ಥಿತಿ ಇದೆ. ಅಲ್ಲಿ ಪರಿಸ್ಥಿತಿ ಏನಾಗಿದೆ ಎನ್ನುವುದರ ಬಗ್ಗೆ ಸವಿಸ್ತಾವಾದ ವಿವರಣೆಯನ್ನು ಸದನಕ್ಕೆ ಕೊಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಪತ್ರಿಕೆಯಲ್ಲಿ ಬಹಳ ಪ್ರಮುಖವಾದ ವಿಚಾರ ಬಂದಿದೆ. ರೌಡಿಗಳ ಕಾಳಗ, ಕೊಲೆ ರಾಜಾಜಿನಗರದಲ್ಲಿ ಮರುಕಳಿಸಿದ ಭೀಕರ ರೌಡಿಗಳ ಹೊಡೆದಾಟ. ನೋಡಿ, ಕಾನೂನು ಪರಿಸ್ಥಿತಿ ಹೇಗಿದೆ. ಇದು ಬಹಳ ಮುಖ್ಯ.

ಅಧ್ಯಕ್ಷರು : ನೀವು ನಿಮ್ಮ ಭಾಷಣದಲ್ಲಿ ಮಾತನಾಡಿ.

ಶ್ರೀ ಶ್ರೀರಾಮಡ್ಡಿ : ಭಾಷಣ ಅಲ್ಲ, ಇದು ಬಹಳ ಮುಖ್ಯ

ಅಧ್ಯಕ್ಷರು : ಅವರ ಕ್ಷೇತ್ರದಲ್ಲಿ ಆಗಿದೆ. ಅವರು ಕಾಂಗ್ರೆಸ್ ಸದಸ್ಯರು. ನಿಮ್ಮ ಹೆಸರು ಸಹ ಕರೆದಿದ್ದೇನೆ ಆಗ ಮಾತನಾಡಿ.

ಶ್ರೀ ಶ್ರೀರಾಮರೆಡ್ಡಿ : ಎಲ್ಲವನ್ನು ಒಂದೇ ವಿಷಯದಲ್ಲಿ ಮಾತನಾಡುವುದಕ್ಕೆ ಆಗುತ್ತದೆಯೇ? ಬಹಳ ಮುಖ್ಯವಾದುದೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ನೀವು ಮಾತನಾಡುವಾಗ ದಯವಿಟ್ಟು ಅದನ್ನು ಕವರ್ ಮಾಡಿ ಹೇಳಿ. ಮಾನ್ಯ ಗೃಹಮಂತ್ರಿಗಳು ಕುಣಿಗಲ್‌ದು ಏನು ಸಮಾಚಾರ?

ಶ್ರೀ ಪಿ. ಜಿ. ಆರ್. ಸಿಂಧ್ಯ : (ಗೃಹ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯಸದಸ್ಯರಿಗೆ ನಾನೇ ಈ ವಿಚಾರವನ್ನು ಬೆಳಿಗ್ಗೆ ಹೇಳಿದ್ದೇನೆ. ಕುಣಿಗಲ್ ಹತ್ತಿರ 4ಕಿಲೋಮೀಟರ್ ದೂರದಲ್ಲಿರತಕ್ಕ ಒಂದು ಹಳ್ಳಿಯಲ್ಲಿ ಎರಡು ಗುಂಪಿನ

ಒಂದು ವೈಷಮ್ಯ ಮುಂಚಿನಿಂದಲೂ ಇತ್ತು,ಕಂಟ್ರಾಕ್ಟ್ ಕೊಡತಕ್ಕ ವಿಚಾರದ ಬಗ್ಗೆ ಡಿಸ್‌ಪ್ಯೂಟ್ ಇರತಕ್ಕದ್ದು. [illegible] ಹೊತ್ತಿಗೆಯಲ್ಲಿ ಇಂದು ಬೆಳಿಗ್ಗೆ ನಾನು ಪ್ರಸ್ತಾಪ ಮಾಡಿದೆನೆ. [illegible] 10ಗಂಟೆಗೆ ನನಗೆ ವರದಿ ಬಂತು. ನಾನೇ ತಕ್ಷಣ [illegible] ಯಾರಿಗೆ ಗುಂಡಿನ ಏಟು ಬಿದ್ದಿದೆ ಅವರು

ಮತ್ತೆ ಉಳಿದ ವಿಚಾರಗಳ ಬಗ್ಗೆ ಒಂದು ಹೇಳಿಕೆಯನ್ನು ನಾಳೆ ಈ ಸದನದಲ್ಲಿ ಇಡುತ್ತೇನೆ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯಅಧ್ಯಕ್ಷರೆ, ಇದು ಎರಡು ಗುಂಪುಗಳ ಮಧ್ಯೆ ನಡೆದ ಘಟನೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಪ್ರಮುಖವಾದ ವ್ಯಕ್ತಿಗೆ ಏಟು ಬಿದ್ದಿರತಕ್ಕ ವಿಚಾರದ ಬಗ್ಗೆ ಸಿಓಡಿ ತನಿಖೆ ಮಾಡಿಸಬೇಕು. ನಿಷ್ಪಕ್ಷಪಾತವಾದ ತನಿಖೆ ನಡೆಯಬೇಕು, ಗಾಯಾಳುಗಳಿಗೆ ಏನು ಅನ್ಯಾಯವಾಗಿದೆ ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಹೇಳುತ್ತೇನೆ. ಯಾವ ಪಕ್ಷ ಎನ್ನುವ ಬಗ್ಗೆ ನಾನು ಉಲ್ಲೇಖ ಮಾಡುವುದಿಲ್ಲಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಿಗೆ ಈ ವೊಂದು ಘಟನೆಯಲ್ಲಿ ಅವರು ಬಹಳ ಅಪಾಯದ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡರು ಇದರ ಬಗ್ಗೆ ನಿಷ್ಪಕ್ಷಪಾತವಾದ ತನಿಖೆಯನ್ನು ನಡೆಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಗೃಹಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯಅಧ್ಯಕ್ಷರೆ, ಅಲ್ಲಿರುವ ಲಾ ಅಂಡ್ ಆರ್ಡರ್ ಪರಿಸ್ಥಿತಿ ನೋಡಿ ಅಲ್ಲಿರುವ ಪೋಲೀಸರಿಂದಲೇ ತನಿಖೆ ಮಾಡಿದರೆ ಬಹುಶಃ ಸೂಕ್ತವೆಂದು ಕಾಣುತ್ತದೆ. ನಮ್ಮ ಹೋಮ್ ಮಿನಿಸ್ಟರ್ ಸ್ಪೆಷಲ್ ಇಂಟರೆಸ್ಟ್ ತೆಗೆದುಕೊಂಡು ಜಾಸ್ತಿ ಪೋಲೀಸರನ್ನು ಹಾಕಿದರೆ ಶಾಂತಿ ಬರಬಹುದು ಹೇಳುತ್ತೇನೆ.

ಶ್ರೀ ಎಸ್.ಪಿ. ಮುದ್ದುಹನುಮೇಗೌಡ : ಪೋಲೀಸರನ್ನು ಹಾಕಿ ಅಲ್ಲಿ ಇರಲಿಕ್ಕೆ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು : ವ್ಯವಸ್ಥೆ ಮಾಡಿಸಲಾಗುತ್ತದೆ. ಮಾನ್ಯ ಸದಾನಂದೇಗೌಡರು 5 ನಿಮಿಷದಲ್ಲಿ ಮುಗಿಸಬೇಕು. ಇವತ್ತು ಒಂದು ದೊಡ್ಡ ಪಟ್ಟಿಯನ್ನು ಕಳುಹಿಸಿದ್ದಾರೆ. ಒಬ್ಬೊಬ್ಬರು ಅವರ ಇಷ್ಟಬಂದ ಹಾಗೆ ಮಾತನಾಡಿದರೆ, ನಿಮ್ಮ ಪಾರ್ಟಿಗೆ ಕೊಟ್ಟಿರುವ ಟೈಮ್‌ನ್ನು ಕಟ್ ಮಾಡಿ ಬೇರೆಯವರು ಮಾತನಾಡುವುದನ್ನು ಅವಾಯ್ಡ್ ಮಾಡುತ್ತೇನೆ. ಅದಕ್ಕೆ ನಿಮ್ಮ ಚೀಫ್‌ವಿಪ್‌ರವರ ಒಪ್ಪಿಗೆ ಇದ್ದರೆ ನನಗೇನೂ ತೊಂದರೆಯಿಲ್ಲ. ನೀವು ಒಬ್ಬರೇ ಮುಕ್ಕಾಲು ಗಂಟೆ ಮಾತನಾಡಿ. ಬೇರೆಯವರ ಹೆಸರು ಕರೆಯುವುದಿಲ್ಲ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣೆ ಪ್ರಸ್ತಾಪ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಸಭಾಧ್ಯಕ್ಷರೆ, ವಿಶೇಷವಾಗಿ ಎಲ್ಲರೂ ಮಾತನಾಡಿದಂತಹ ಶಿಕ್ಷಣಕ್ಷೇತ್ರ, ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್, ವಸತಿ, ರಸಗೊಬ್ಬರ, ಆರೋಗ್ಯ ಈ ಯಾವುದೇ ವಿಚಾರವನ್ನು ನಾನು ಮುಟ್ಟಲಿಕ್ಕೆ ಹೋಗುವುದಿಲ್ಲ. ಏಕೆಂದರೆ ಇವತ್ತು ಮಾನ್ಯ ಸಿದ್ದರಾಮಯ್ಯನವರು ಒಳ್ಳೆಯ ಊಟದ ವ್ಯವಸ್ಥೆ ಮಾಡಿದ್ದರು. ನಾವು ಯಾವತ್ತೂ ರೂಮಿನಲ್ಲಿ ಗಂಜಿ ಚಟ್ನಿ ಊಟ ಮಾಡುವವರು. ಇವತ್ತು ಒಳ್ಳೆಯ ಊಟ ಬಂದಹಾಗೆ ಯಾವುದಾದರೂ ಸ್ಪೆಷಲ್ ವಿಷಯಗಳನ್ನು ಮಾತನಾಡಬೇಕೇ ಹೊರತು ಬಾಕಿ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುತ್ತಿಲ್ಲ. ಆದರೂ ಕೂಡ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವಂತದ್ದು ಅತ್ಯಂತ ಸೂಕ್ತವೆಂದು ನಾನು ಭಾವಿಸುತ್ತಿದ್ದೇನೆ. ನಾನು ಈಗಾಗಲೇ ಹೇಳಿದ ಹಾಗೆ ಸಹಕಾರ ರಂಗದ ಬಗ್ಗೆ ನಮ್ಮ ಸರ್ಕಾರ ಹೆಚ್ಚಿನ ಮುತುವರ್ಜಿಯನ್ನು ಕೊಡಲಿಲ್ಲ. ಇದರಲ್ಲಿ ರಾಜಕೀಯ ಹಸ್ತಕ್ಷೇಪವಿರಬಾರದು ಮತ್ತು ನಾಮಿನೇಷನ್ ಮಾಡಬಾರದು. ರಾಜಕೀಯ ದ್ವೇಷದಿಂದ ಸೂಪರ್ ಸೀದ್ ಮಾಡಿದಂತಹ ಎಲ್ಲಾ ಸಂಘಸಂಸ್ಥೆಗಳ ಅಧಿಕಾರವನ್ನು ಪುನಃ ಚುನಾಯಿತ ಪ್ರತಿನಿಧಿಗಳ ಕೈಗೆ ಕೊಡುವಂತಹ ಒಂದು ವ್ಯವಸ್ಥೆಯಾಗಬೇಕು. ಮಂಗಳೂರಿನ ಜನತಾ ಬಜಾರಿನ ಬಗೆ